ಎಚ್.ಜಿ. ಜಗದೀಶ್, ಮೈಸೂರು

*ಮದ್ಯಪಾನ ಮಾಡುವುದನ್ನು 'ಗುಂಡು ಹಾಕುವುದು' ಎಂದು ಏಕೆ ಕರೆಯುತ್ತಾರೆ ರಾಂಜೀ?*



ಒಳಗೆ ಸೇರುತ್ತಲೇ ಸರಿಯಾಗಿ ರೌಂಡ್ ರೌಂಡ್ ಹೊಡೆಸುತ್ತದಲ್ಲ!

ಶ್ರೀನಾಥ್ ಕೊನೇಟಿ, ಬೆಂಗಳೂರು

*ನಾನೊಂದು ಟಿವಿ ಸೀರಿಯಲ್ ಮಾಡಬೇಕೆಂದಿದ್ದೇನೆ. ಕಥೆ ಬರೆದುಕೊಡುತ್ತೀರಾ ರಾಮ್?*

ಏಕೆ? ನಾನು ಅಷ್ಟೊಂದು ಎಳೆದೆಳೆದೆಳೆದೆಳೆದು ಬರೆಯುತ್ತೀನೇನು?

ಸೃಜನ ಜೈನ್, ಬಳ್ಳಾರಿ

*ನಿಮ್ಮ ಉತ್ತರದ ಹೊಳೆ ಬೇಸಿಗೆಯಲ್ಲೂ ಬರಿದಾಗದಿರುವುದರ ಗುಟ್ಟೇನು?*

ಉತ್ತರದ ಬುಗ್ಗೆ ಮತ್ತೆ ಮತ್ತೆ ಚಿಮ್ಮುವಂತೆ ಪ್ರಚೋದಿಸುವ ಸಾಮರ್ಥ್ಯವಿರುವ ಪ್ರಶ್ನೆಗಳು.

ಬಿ.ಎ. ಅಜರುದ್ದೀನ್, ಬಾಚಹಳ್ಳಿ

*ಹಜ್‌ಗೆ ಹೋಗಬೇಕಾದ ಮುಸ್ಲಿಂ ಒಬ್ಬರು ತಿರುಪತಿಗೆ ಹೋಗಿಬಂದರಲ್ಲಾ, ಇದರ ಉದ್ದೇಶವೇನು ರಾಮ್?*



ಭೇಷ್. ಜಾತಿ, ಧರ್ಮಗಳನ್ನು ಮೀರಿ ದೇವರನ್ನು ಕಾಣಬಲ್ಲವನೇ ನಿಜವಾದ ಭಕ್ತ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಆಕಾಶಕ್ಕೆ ಉಗಿಯುವವರನ್ನು ಏನೆನ್ನುತ್ತಾರೆ?*

ಸ್ವ-ಪ್ರೋಕ್ಷಣಾ ಚತುರ!

ರಾಮಚಂದ್ರ ಮಾಧವ ಪೈ, ಹೊನ್ನಾವರ

*ಸಾಗರಕ್ಕೂ, ಸಂಸಾರ ಸಾಗರಕ್ಕೂ ಏನು ವ್ಯತ್ಯಾಸ?*

ಲವಣ ಇದ್ದರೆ ಸಾಗರ; ಲವ್, ಹಣ ಇದ್ದರೆ ಸಂಸಾರ.

ರಮೇಶ. ಜ. ಬೊಂಗಾಳೆ, ಬೈಲಹೊಂಗಲ

*ಮದುವೆಯೇ ಮನುಜನ ಮೊದಲನೆಯ ಬಂಧನ ಎನ್ನುವರಲ್ಲಾ, ಯಾಕೆ ಸಾರ್?*

ಅಲ್ಲಿಯವರೆಗೆ ಸ್ವೀಟ್ ಹೋಂ ಆಗಿರುವುದು ನಂತರ ಖಾ(ಕಾ)ರಾ-ಗೃಹವಾಗುವುದರಿಂದ!

ಪೇಂಟರ್ ಪಾಪು, ಸಂತೇಮರಹಳ್ಳಿ

*ಹೆಂಡತಿ ಸೇವಕಿಯಾದರೆ ಗಂಡನು ದೇವರೆ?*

ದೇವರ ಒಂದು ಗುಣವಂತೂ ಇರುತ್ತದೆ – ಬೇಕೆಂದಾಗ ಕಣ್ಣಿಗೆ ಕಾಣುವುದೇ ಇಲ್ಲ!

ಮಹಾವೀರ ಕಾಸರ, ಶಿವಮೊಗ್ಗ

*ಪುಣ್ಯತಿಥಿ ಎಂದರೇನು?*

ಸತ್ತ ಎಲ್ಲರಿಗೂ ಶ್ರಾದ್ಧಭಾಗ್ಯ ಇರುವುದಿಲ್ಲ. ಇಂದು ಅವರ ತಿಥಿ ಮಾಡುತ್ತಿರುವುದು ಸತ್ತವರ ಪುಣ್ಯ ಎಂದು!

ಆರ್.ಸಿ. ಪರಶುರಾಮ್, ಶಿಕಾರಿಪುರ

*ನಮ್ಮ ದೇಶದಲ್ಲಿ ರಸ್ತೆಯಲ್ಲಿ ಓಡಾಡುವ ಕಾರುಗಳಿಗಿಂತ ಮನೆಯ ಮುಂದೆ ಕವರ್ ಹೊದ್ದು ನಿಂತಿರುವ ಕಾರುಗಳೇ ಹೆಚ್ಚಾಗಿದೆಯಲ್ಲ?*

ಕಾರ್ ಪ್ರೇಯಸಿಯಂತೆ; ಹೊಂದುವುದು ಬೇಕೇಬೇಕು, ಆದರೆ ಆಚೆ ಕರೆದುಕೊಂಡುಹೋದರೆ, ಅಯ್ಯಯ್ಯೋ ದುಬಾರಿ! ಸಾಕೋ ಸಾಕು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ನಿಮ್ಮನ್ನು ಈತನಕ ಯಾವ ಶೂರ್ಪನಖಿ, ತಾಟಕಿಯರೂ ಕಾಡಿಲ್ಲವೇ ರಾಂ?*

ಕಾಡದೇ ಏನು! ಈ ಟೆಲಿಮಾರ್ಕೆಟಿಂಗ್ ಲಲನೆಯರ ಮುಂದೆ ಆ ರಕ್ಕಸಿಯರು ಸಾಧುಪ್ರಾಣಿಗಳು!

ಟಿ.ಎಂ. ಮಾನಪ್ಪ, ಶಿವಮೊಗ್ಗ

*ದೇವಸ್ಥಾನಗಳು ಗುಡ್ಡದ ಮೇಲೆ ಇರುವುದೇಕೆ?*

ಸೂಕ್ತವೇ; ಗುಡ್ಡ god ವಾಸ ಮಾಡುವ ಪ್ರದೇಶ; ಅದಕ್ಕೇ ಅದನ್ನು ಗುಡ್ಡಗಾಡು ಪ್ರದೇಶ ಎಂದು ಕರೆಯುವುದು!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ದೇವ ಮಾನವರಿಗೂ, ಋಷಿ ಮುನಿಗಳಿಗೂ ಏನು ವ್ಯತ್ಯಾಸ?*

ಋಷಿಮುನಿಗಳದು ತಪೋಗುಣ; ದೇವಮಾನವರದು ತಮೋಗುಣ.

## ಬಹುಮಾನಿತ ಪ್ರಶ್ನೆ

ಅಮರಯ್ಯಾ ಪತ್ರಿಮಠ, ಶೋರಾಪೂರ

*ಮಾನವನಿಗೂ ಬ್ರಹ್ಮನಂತೆ ನಾಲ್ಕು ತಲೆಗಳಿದ್ದಿದ್ದರೆ...?*

ಹೇಗೆ ತಿರುಗಿ ಮಲಗಿದರೂ ಒಂದು ಮೂಗು ಅಪ್ಪಚ್ಚಿಯಾಗುತ್ತಿತ್ತು!

ಎನ್. ಗೋಪಾಲರಾವ್, ಹೊಸಕೆರೆಹಳ್ಳಿ

*ಯಶಸ್ವಿ ಪುರುಷನ ಹಿಂದೆ ಮಹಿಳೆಯೊಬ್ಬಳಿರುತ್ತಾಳೆ. ಅಪಯಶಸ್ಸು ಪಡೆದವನ ಹಿಂದೆ?*

ಸಾಲಗಾರರು, ಮೋಸಹೋದವರು, ಪೊಲೀಸ್, ರೌಡಿಗಳು, ಕೋರ್ಟಿನ ಅಮೀನ..

ಟಿ.ಆರ್. ರವೀಂದ್ರ, ಬೆಂಗಳೂರು

*ಸ್ತ್ರೀಬುದ್ಧಿ ಪ್ರಳಯಾಂತಕ ಎನ್ನುತ್ತಾರೆ ಕೆಲವರು; ಹೆಣ್ಣಿನ ಬುದ್ಧಿ ಮೊಣಕಾಲ ಕೆಳಗೆ ಎನ್ನುತ್ತಾರೆ ಕೆಲವರು. ಯಾವುದು ಸರಿ?*

ಸ್ತ್ರೀ ಹೈಕಮಾಂಡ್ ಆದರೆ ಮೊದಲನೆಯದು ಸರಿ. ಕಾಮುಕನ ಕಣ್ಣಿಗೆ ಬಿದ್ದು, ಕಾಲಿಗೆ ಬುದ್ಧಿ ಹೇಳಬೇಕಾದಾಗ ಎರಡನೆಯದು ಸರಿ!

ವೈ.ಜಿ. ನರಸಿಂಹನ್, ಶಿವಮೊಗ್ಗ

*ಹಣದ ಅಮಲಿಗೂ, ಹೆಂಡದ ಅಮಲಿಗೂ ವ್ಯತ್ಯಾಸವೇನು?*



ಹೆಂಡದ ಅಮಲು ಕೇವಲ ನಡಿಗೆ ತಪ್ಪಿಸುತ್ತದೆ, ಹಣದ ಅಮಲು ನಡವಳಿಕೆಯನ್ನೇ ತಪ್ಪಿಸುತ್ತದೆ.

ಸೈಯದ್ ಭಾಷಾ, ಕುರುವಳ್ಳಿ

*ಈಗಿನ ಕಾಲದಲ್ಲಿ ಜಾಸ್ತಿ ಮಾತನಾಡುವವರನ್ನು ನಂಬಬೇಕೋ, ಕಡಿಮೆ ಮಾತನಾಡುವವರನ್ನು ನಂಬಬೇಕೋ?*

ಕೆಲಸದ ಮೂಲಕ ಮಾತನಾಡುವವರನ್ನು.

ಬೆಟ್ಟಹಳ್ಳಿ ಗೋಪಿನಾಥ್, ಸೂಲಿಬೆಲೆ

ಪಾಂಡುವಿನ ಪುತ್ರರಾದ ಪಂಚ ಪಾಂಡವರು ಒಬ್ಬಳನ್ನೇ ವರಿಸಿದ್ದೇಕೆ ಮಹಾಪ್ರಭು?

ಕಾಡುಮೇಡುಗಳನ್ನು ಅಲೆಯುವಾಗ ಐದೈದು ಹೆಂಡತಿಯರನ್ನು ಕಾಪಾಡಿಕೊಳ್ಳುವುದು ಕಷ್ಟವೆಂದು.

■ ರಾಮ್